ಚಕ್ಕನೆ ಮಗನಿಗೆ ಫೋನ್ ಮಾಡಿದ ಪ್ರಾಣೇಶ, ಆ ಕ್ಷಣಕ್ಕೆ ಏನೇನು ಮನಸ್ಸಿಗೆ ತೋಚಿತೋ ಅದನ್ನೆಲ್ಲ ಬಿಟ್ಟೂಬಿಡದೆ ಮಾತಾಡಿದ, ''ದಯವಿಟ್ಟು ಇವತ್ತು ಸಂಜೆ ಪಾರ್ಟಿಗೆ ಬಾ, ನಿನ್ನ ಬಾಯ್‌ಫ್ರೆಂಡನ್ನೂ ಕರೆದುಕೊಂಡು ಬಾ. ನಿನ್ನ ಬಾಯ್‌ಫ್ರೆಂಡ್ ಏಷಿಯನ್, ಬಿಳಿಯ, ಕರಿಯ ಯಾರೇ ಆಗಿರಲಿ; ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಏನೇ ಆಗಿರಲಿ. ಇದು ನನ್ನ ಪ್ರಾಮಿಸ್!''

ಮಾಡಿದ್ದಾನೆ. ಆದರೆ, ಅವೆಲ್ಲ ಆ ಕ್ಷಣ ಯಾವ ಉಪಯೋಗಕ್ಕೂ ಬರಲಿಲ್ಲ. ಆ ಕ್ಷಣ ಪ್ರಾಣೇಶ ತನ್ನನ್ನೇ ತಾನು ಮರೆತ. "ನಿನಗೆ ತಲೆ ಸರಿ ಇದೆಯಾ, ಸತ್ಯ? ನನಗೆ ನಂಬಿಕೆಯಾಗುತ್ತಿಲ್ಲ. ನೀನು ನನ್ನ ಮಗ ಅನ್ನೋದಕ್ಕೂ ನಾಚಿಕೆಯಾಗುತ್ತೆ" ಎನ್ನುವ ಅರ್ಥದಲ್ಲಿ ಬಾಯಿಗೆ ಬಂದದ್ದನ್ನು ಐದು ನಿಮಿಷ ಎಡಬಿಡದೇ ಬಯ್ದು.

ಅಷ್ಟೆಲ್ಲ ಬಯ್ಗಳುಗಳನ್ನು ಸಂಯಮದಿಂದ ಕೇಳಿಸಿಕೊಂಡು, "ಡ್ಯಾಡಿ, ನೀನು ಮೆಚ್ಯೂರ್ ಅಂದುಕೊಂಡಿದ್ದೆ. ನನ್ನ ನಿರೀಕ್ಷೆಯನ್ನು ಸುಳ್ಳಾಗಿಸಿದಿರಿ" ಎಂದ ಸತ್ಯ.

"ಏನು? ನಾನು ನಿನ್ನ ನಿರೀಕ್ಷೆಯನ್ನು ಸುಳ್ಳಾಗಿಸಿದೆನೇ? ನೀನು ನಮ್ಮನ್ನು ನಿರಾಸೆಗೊಳಿಸಿದೆ, ನಮ್ಮ ಎಲ್ಲ ನಿರೀಕ್ಷೆಗಳನ್ನೂ ಗಾಳಿಗೆ ತೂರಿದೆ. ಎಕಾನಾಮಿಕ್ಸ್‌ನಲ್ಲಿ ಸೀಟು ಸಿಕ್ಕಿತ್ತು, ಅದನ್ನು ಬಿಟ್ಟು ಮ್ಯೂಸಿಕ್ ತೆಗೆದುಕೊಂಡೆ; ಈಗ ಇದು ಬೇರೆ" ಎಂದು ಕೂಗಾಡಿದ.

ಅಷ್ಟರಲ್ಲಿ ಟ್ಯಾಕ್ಸಿ ಬಂದ ನೋಟಿಫಿಕೇಷನ್ ಮಗನ ಫೋನಿಗೆ ಬಂತು, ಮಗ ಹೊರಟು ನಿಂತ.

"ಮಮ್ಮಿಗೆ ಹೇಳಿದ್ದೀಯಾ, ಸತ್ಯ?" ಎಂದು ಕೇಳಿದ ಪ್ರಾಣೇಶ.

"ಇಲ್ಲಾ ಡ್ಯಾಡಿ, ಅದು ನಿನ್ನ ಕೆಲಸ. ಮತ್ತೆ ವೆಡ್ಡಿಂಗ್ ಆ್ಯನಿವರ್ಸರಿ ಪಾರ್ಟಿಗೆ ಗುಡ್‌ಲಕ್" ಎಂದು ಶೂ ಹಾಕಿಕೊಂಡ.

"ಏನು ಹಾಗಂದರೆ, ನಮ್ಮ ಆ್ಯನಿವರ್ಸರಿ ಪಾರ್ಟಿಗೆ ಬರೋದಿಲ್ವೇ? ಬೇಡ ಬಿಡು, ಬರಬೇಡ. ನೀನು ಬರದಿದ್ದರೇನೇ ಒಳ್ಳೆಯದು" ಎಂದು ಬಾಗಿಲು ಹಾಕಿಕೊಂಡ.

ಮಗ ಹೊರಟು ಹೋದ ಮೇಲೆ ಮಗನ ಮೇಲೆ ಅಸಾಧ್ಯ ಕೋಪ ಬಂತು. ಇನ್ನೊಂದು ಪೆಗ್ ಹಾಕಿಕೊಂಡ. ಹೌಸ್‌ವೈಫ್ ಆಗಿದ್ದರೂ ಇರುವ ಒಬ್ಬ ಮಗನನ್ನು ಕೂಡ ಸರಿಯಾಗಿ ಬೆಳೆಸಲು ಇವಳಿಗೆ ಸಾಧ್ಯವಾಗಲಿಲ್ಲ ಎಂದು ಮಗನಿಗಿಂತ ಹೆಚ್ಚಿನ ಕೋಪ ಪದ್ಮಜಾಳ ಮೇಲೆ ಬಂತು. ಲೈಂಗಿಕತೆಗೂ ಬೆಳೆಸುವ ವಾತಾವರಣಕ್ಕೂ ಅಂತಹ ಸಂಬಂಧವೇನಿಲ್ಲ ಎನ್ನುವುದು ಪ್ರಾಣೇಶನಿಗೆ ಗೊತ್ತಿಲ್ಲದ ವಿಷಯವೇನಲ್ಲ. ಬರೀ ದೇವರು, ಏಕಾದಶಿ, ದ್ವಾದಶಿ, ಮಂತ್ರ, ಹಾಡು, ಕಡಿಗೆ, ಮುಟ್ಟು ಅನ್ನುತ್ತ ಕೂತರೆ ಮಗ ಹಾಳಾಗದೇ ಇರುತ್ತಾನೆಯೇ? ಮತ್ತೊಂದು ಪೆಗ್ ಹಾಕಿಕೊಂಡ. ಆ ಅಮಲಿನಲ್ಲಿ ಪದ್ಮಜಾಳ ಬದಲಿಗೆ ಜಸ್ಸಿ ಇದ್ದಿದ್ದರೆ ಅನಿಸಿ, ಜಸ್ಸಿಯ ನೆನಪು ಒತ್ತರಿಸಿಕೊಂಡು ಬಂತು.

ತಾನು ಬೆಂಗಳೂರಲ್ಲಿ ಎಂ.ಬಿ.ಬಿ.ಎಸ್. ಮುಗಿಸಿ ಪಿ.ಜಿ.ಐ ಆಸ್ಪತ್ರೆಯಲ್ಲಿ ಎಂ.ಎಸ್. (ಸರ್ಜರಿ) ಮಾಡಲು ಚಂಡೀಗಡಕ್ಕೆ ಹೋದಾಗ ಜೊತೆಯಾದವಳು, ತನಗಿಂತ ಎರಡು ವರ್ಷ ಸೀನಿಯರ್ ಆಗಿದ್ದ ಎಂ.ಡಿ. (ಮಕ್ಕಳಶಾಸ್ತ್ರ) ಮಾಡುತ್ತಿದ್ದ ದಿಲ್ಲಿಯ ಜಸ್ಸಿ, ಜಸ್ಬೀರ್ ಕೌರ್. ಅದು ಶುರುವಾದದ್ದು ಹೀಗೆ: ಮೆಸ್ಸಿನಲ್ಲಿ ಊಟ ಮಾಡಲು ಕೂತಾಗ ಪಕ್ಕದಲ್ಲಿ ಹಿಂದಿಯ ಪ್ರಖ್ಯಾತ ಗಝಲ್ ಗಾಯಕ ಜಗಜೀತಸಿಂಗನ 'ಮಿರ್ಜಾ ಗಾಲಿಬ್' ಕ್ಯಾಸೆಟ್ ಕಾಣಿಸಿತು; ಯಾರಪ್ಪಾ ತನ್ನಂತೆ ಜಗಜೀತಸಿಂಗನ